**ಶ್ರೀ ಸುಬೋಧ್ ಯಾದವ್, ಭಾ.ಆ.ಸೇ, ರಾಜ್ಯ ಯೋಜನಾ ನಿರ್ದೇಶಕರು, ಎಸ್‌ಎಸ್‌ಎ/ಆರ್‌ಎಂಎಸ್‌ಎ ಇವರು ದಿನಾಂಕ: 06.03.2013 ರಂದು ಕೋಲಾರ ಜಿಲ್ಲೆಗೆ ನೀಡಿದ ಭೇಟಿ ವರದಿ.**

*****

❖ **ಉಪನಿರ್ದೇಶಕರ ಕಛೇರಿ, ಕೋಲಾರ**

ಬೆಳಿಗ್ಗೆ 10.00 ಗಂಟೆಗೆ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ಈ ಕಛೇರಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಲಾಯಿತು. ದಿನಾಂಕ: 25.02.2013 ರಂದು ರಾಜ್ಯ ಕಛೇರಿಯಿಂದ ಒಂದು ನಮೂನೆ ಸಿದ್ಧಪಡಿಸಿ ಎಲ್ಲಾ ಜಿಲ್ಲೆಗಳವರೂ ಈ ನಮೂನೆಯಲ್ಲಿ ಪ್ರತಿ ಮಾಹೆ ವರದಿ ನೀಡಬೇಕೆಂದು ಸ್ಪಷ್ಟವಾಗಿ ತಿಳಿಸಿ ರಾಜ್ಯದ ಎಲ್ಲಾ ಜಿಲ್ಲೆಗಳವರಿಗೂ ಇ–ಮೇಲ್ ಮೂಲಕ ಸುತ್ತೋಲೆ ಕಳುಹಿಸಿದ್ದು, ಈ ಬಗ್ಗೆ ಪರಿಶೀಲಿಸಲಾಗಿ, ಡಿಡಿಪಿಐ, ಡಿವೈಪಿಸಿಯವರು ತಮ್ಮ ಗಮನಕ್ಕೆ ಈ ವಿಚಾರ ಬಂದಿಲ್ಲವೆಂಬ ಅಂಶವನ್ನು ತಿಳಿಸಿದ್ದು, ಡಿವೈಪಿಸಿಯವರು ಕೇವಲ ಮುಖ ಪತ್ರ ಮಾತ್ರ ಗಮನಿಸಿದ್ದು, ಉಳಿದ ನಮೂನೆಗಳ ವಿವರವನ್ನೂ ನೋಡಿರುವುದಿಲ್ಲ ಎಂಬ ಮಾಹಿತಿಯನ್ನು ತಿಳಿಸಿದರು. ರಾಜ್ಯ ಕಛೇರಿಯಿಂದ ಕಳುಹಿಸಿದಂತಹ ಪತ್ರಗಳ ಬಗ್ಗೆ ಗಮನಹರಿಸುವ ಪದ್ಧತಿಯನ್ನು ರೂಢಿಸಿಕೊಂಡಿಲ್ಲದಿರುವುದು ಇವರ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ಸಿವಿಲ್ ಕಾಮಗಾರಿಯಲ್ಲಿ ಮಂಜೂರಾದ 205 ಶಾಲಾ ಕೊಠಡಿಗಳಲ್ಲಿ ಈವರೆಗೆ 144 ಕೊಠಡಿಗಳ ಕಾಮಗಾರಿ ಪ್ರಾರಂಭಿಸಿಲ್ಲದಿರುವುದನ್ನು ಸಹ ಗಮನಿಸಲಾಯಿತು. ಈ ಕಾಮಗಾರಿಯ ಪ್ರಾರಂಭಗಳಿಗೆ ಇರುವ ಅಡೆತಡೆಗಳ ಬಗ್ಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ. ಈ ಬಗ್ಗೆ ವಿಚಾರಿಸಲಾಗಿ ಸೂಕ್ತ ಉತ್ತರ ನೀಡುವಲ್ಲಿ ವಿಫಲರಾಗಿರುತ್ತಾರೆ. ಈ ಸಂಬಂಧ ಸ್ಥಳೀಯವಾಗಿ ಬಗೆಹರಿಸಬಹುದಾದಂತಹ ಸಣ್ಣ–ಪುಟ್ಟ ಅಡೆತಡೆಗಳ ಕುರಿತು ಗಮನಹರಿಸಿ ಸಮಸ್ಯೆ ಬಗೆಹರಿಸಿ ಕಾಮಗಾರಿ ಕಾರ್ಯ ನಡೆಸಬಹುದಾಗಿದ್ದರೂ ಸಹ ಇವುಗಳತ್ತ ಗಮನಹರಿಸಿಲ್ಲದಿರುವುದು ಕಂಡು ಬಂತು. ಈ ಎಲ್ಲಾ ಅಂಶಗಳ ಕುರಿತು ಅವರಿಂದ ವಿವರಣೆ ಪಡೆಯಲು ಹಾಗೂ ಡಿಡಿಪಿಐ (ಆ), ಡಿವೈಪಿಸಿ, ಎಪಿಸಿಯವರು ವೈಯುಕ್ತಿಕ ಗಮನಹರಿಸಿ ಕಾರ್ಯ ನಿರ್ವಹಿಸಲು ಸೂಚನೆ ನೀಡಲಾಯಿತು.

**ಕ್ರಮ : ಉಪನಿರ್ದೇಶಕರು (ಆ)/ಡಿಐಪಿಸಿ/ಡಿವೈಪಿಸಿ, ಕೋಲಾರ**

❖ **ಡಿವೈಪಿಸಿ ಕಛೇರಿ, ಕೋಲಾರ**

ನಂತರ ಡಿವೈಪಿಸಿ ಕಛೇರಿಗೆ ಭೇಟಿ ನೀಡಲಾಯಿತು. ಭೇಟಿ ಸಮಯದಲ್ಲಿ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವವರಲ್ಲಿ ಕ್ಲಿನಿಕಲ್ ಸೈಕಾಲಜಿಸ್ಟ್ & ಫಿಸಿಯೋ ಥೆರಫಿಸ್ಟ್ ಸಿಬ್ಬಂದಿಯು ಕಛೇರಿಯಲ್ಲಿ ಹಾಜರಿರಲಿಲ್ಲ, ಹಾಗೂ ಎಲ್ಲಿಗೆ ಹೋಗಿದ್ದಾರೆಂಬುದರ ಕುರಿತು ಸಹ ಚಲನ–ವಲನ ಪುಸ್ತಕದಲ್ಲಿ ನಮೂದಿಸಿರಲಿಲ್ಲ, ಅಲ್ಲದೆ ಡಿವೈಪಿಸಿಯವರಿಗೆ ಸಹ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇರುವುದು ಕಂಡು

ಬಂತು. ಪರಿಶೀಲಿಸಲಾಗಿ ಈ ಕಛೇರಿಯಲ್ಲಿ ಯಾವುದೇ ಕಾರ್ಯ ಕ್ರಮಬದ್ಧವಾಗಿ ನಡೆಯುತ್ತಿಲ್ಲದೇ ಇರುವುದನ್ನು ಗಮನಿಸಿ, ಇನ್ನು ಮುಂದೆ ಅರಿಯಾಗಿ ಪಾಲಿಸಲು ಎಚ್ಚರಿಸಲಾಯಿತು.

ಡಿವೈಪಿಸಿಯವರಿಗೆ ಗಣಕ ಯಂತ್ರದ ಬಳಕೆ ಕುರಿತಂತೆ ಅಂದರೆ ಇ–ಮೇಲ್ ಹಾಗೂ ಇತರೆ ಮಾಹಿತಿಯನ್ನು ಪರಿಶೀಲಿಸುವ ಹಾಗೂ ಕಳುಹಿಸುವುದು ಇವರಿಗೆ ತಿಳಿದಿಲ್ಲದಿರುವುದು, ಹಾಗೂ ಇತರೆ ಸಿಬ್ಬಂದಿ ಸಹಾಯದಿಂದ ಪರಿಶೀಲಿಸುತ್ತಿರುವುದು ಕಂಡು ಬಂತು. ಇಂತಹ ಯಾವುದೇ ಸಂದರ್ಭದಲ್ಲಿ ಏಜೆನ್ಸಿಯಿಂದ ನೇಮಕಗೊಂಡಿರುವ ಸಿಬ್ಬಂದಿಗೆ ಕಛೇರಿಯ ಗೌಪ್ಯತೆ ಕಾಪಾಡುವ ಹಿತದೃಷ್ಟಿಯಿಂದ ಪಾಸ್‌ವರ್ಡ್ ನೀಡದಿರಲು ಸೂಚಿಸಲಾಯಿತು. ಹಾಗೂ ಖುದ್ದಾಗಿ ಡಿವೈಪಿಸಿಯವರೇ ಗಣಕಯಂತ್ರ ಬಳಕೆ ಇ–ಮೇಲ್ ಬಳಕೆ ಮಾಡುವ ಪರಿಣತಿ ಹೊಂದಲು ಸೂಚನೆ ನೀಡಲಾಯಿತು.

**ಕ್ರಮ : ಡಿವೈಪಿಸಿ, ಕೋಲಾರ**

- **ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ**

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಡಯಟ್ ಇಲ್ಲಿಗೆ ಭೇಟಿ ನೀಡಲಾಯಿತು. ಸಿಎಎಲ್‌ಸಿ ಶಾಲಾ ಶಿಕ್ಷಕರಿಗೆ ಗಣಕಯಂತ್ರ ಬಳಕೆ ಕುರಿತಂತೆ ತರಬೇತಿ, ಮುಖ್ಯ ಶಿಕ್ಷಕರಿಗೆ ನಾಯಕತ್ವ ಅಭಿವೃದ್ಧಿ ತರಬೇತಿ, ದೈಹಿಕ ಶಿಕ್ಷಣ ಶಿಕ್ಷಕರಿಗೆ ತರಬೇತಿ ನಡೆಯುತ್ತಿತ್ತು. ಸಿಎಎಲ್‌ಸಿ ತರಬೇತಿ ಕೇಂದ್ರದ ಶಿಬಿರಾರ್ಥಿಗಳನ್ನು ತಮ್ಮ ಶಾಲೆಯಲ್ಲಿ ಗಣಕಯಂತ್ರಗಳು ಕಾರ್ಯ ನಿರ್ವಹಿಸುತ್ತಿರುವುದರ ಬಗ್ಗೆ ಪ್ರಶ್ನಿಸಲಾಗಿ, ಕೆಲವು ಶಾಲೆಗಳಲ್ಲಿ ಕೆಲವು ಗಣಕ ಯಂತ್ರಗಳು, ಇನ್ನೂ ಕೆಲವು ಶಾಲೆಗಳಲ್ಲಿ ಭಾಗಶ: ದುರಸ್ಥಿಯಲ್ಲಿದೆ ಎಂಬ ಅಂಶವನ್ನು ತಿಳಿಸಿದ್ದು, ಕೂಡಲೇ ಗಮನಹರಿಸಿ ಗಣಕ ಯಂತ್ರಗಳನ್ನು ದುರಸ್ಥಿಗೊಳಿಸಿ, ಈ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಯಿತು.

**ಕ್ರಮ : ಡಿಡಿಪಿಐ (ಆ)/ಡಿವೈಪಿಸಿ, ಕೋಲಾರ**

- **ಬಿಇಒ/ಬಿಆರ್‌ಸಿ ಕೇಂದ್ರ, ಆದರ್ಶ ವಿದ್ಯಾಲಯ, 12 ತಿಂಗಳ ಆರ್‌ಎಸ್‌ಟಿ ಕೇಂದ್ರ, ರಾಮಸಾಗರ, ಹಿರಿಯ ಪ್ರಾಥಮಿಕ ಶಾಲೆ, ಬಂಗಾರಪೇಟೆ ತಾಲ್ಲೂಕು**

ಬಿಇಒ/ಬಿಆರ್‌ಸಿ, ಬಂಗಾರಪೇಟೆ ಇಲ್ಲಿಗೆ ಭೇಟಿ ನೀಡಲಾಯಿತು. ಬಿಆರ್‌ಸಿಯಲ್ಲಿ ಸಿಡಬ್ಲ್ಯೂಎಸ್‌ಎನ್ ಮಕ್ಕಳಿಗೆ ಸಂಬಂಧಿಸಿದ ಸಾಧನ ಸಲಕರಣೆಗಳನ್ನು ವಿತರಣೆ ಮಾಡಿರುವುದನ್ನು ಪರಿಶೀಲಿಸಿದ್ದು, ಇನ್ನೂ ಹಲವು ಸಾಧನ ಸಲಕರಣೆಗಳು ವಿತರಿಸಲು ಬಾಕಿ ಉಳಿದಿದ್ದು, ವಿತರಿಸಿದ ಕುರಿತು ದಾಖಲೆಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿಲ್ಲದಿರುವುದನ್ನು ಗಮನಿಸಿ, ಸೂಕ್ತ ಘೋಟೋದೊಂದಿಗೆ ದಾಖಲೆಗಳನ್ನು ಕಾಯ್ದಿರಿಸಲು ಸೂಚಿಸಲಾಯಿತು.

**ಕ್ರಮ : ಬಿಇಒ/ಬಿಆರ್‌ಸಿ, ಬಂಗಾರಪೇಟೆ**

ಆದರ್ಶ ವಿದ್ಯಾಲಯ ಇಲ್ಲಿಗೆ ಭೇಟಿ ನೀಡಲಾಯಿತು. ಈ ಶಾಲೆಯಲ್ಲಿ ಎರಡು ಶೌಚಾಲಯವಿದ್ದು, ಒಂದು ಮಾತ್ರ ಸುಸ್ಥಿತಿಯಲ್ಲಿದ್ದು ನೀರಿನ ಸಾಕಷ್ಟು ಇರಲಿಲ್ಲ. ಈ ಸಂಬಂಧ ತುರ್ತು ಕ್ರಮ ವಹಿಸಲು ಬಿಇಒ/ಬಿಆರ್‌ಸಿ ರವರಿಗೆ ತಿಳಿಸಲಾಯಿತು.

**ಕ್ರಮ : ಬಿಇಒ/ಬಿಆರ್‌ಸಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ**

ಹಿರಿಯ ಪ್ರಾಥಮಿಕ ಶಾಲೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಆವರಣ, ಬಂಗಾರಪೇಟೆ ಇಲ್ಲಿಗೆ ಭೇಟಿ ನೀಡಲಾಯಿತು. ಕಂಪ್ಯೂಟರ್ ಕೊಠಡಿಯಲ್ಲಿ ಮೇಲ್ಚಾವಣಿ ಲೀಕೇಜ್ ಆಗುತ್ತಿದ್ದು, ತಕ್ಷಣ ದುರಸ್ಥಿಪಡಿಸಲು ಮುಖ್ಯ ಶಿಕ್ಷಕರಿಗೆ ಸೂಚಿಸಲಾಯತು.

**ಕ್ರಮ : ಮುಖ್ಯ ಶಿಕ್ಷಕರು/ಬಿಇಒ/ಬಿಆರ್‌ಸಿ, ಬಂಗಾರಪೇಟೆ ತಾ, ಕೋಲಾರ ಜಿಲ್ಲೆ**

❖ **ಕೆ.ಜಿ.ಬಿ.ವಿ, ರಾಮಸಾಗರ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ**

ಕೆ.ಜಿ.ಬಿ.ವಿ. ರಾಮಸಾಗರ ಈ ಶಾಲೆಗೆ ಭೇಟಿ ನೀಡಲಾಯಿತು. ಈ ಕೇಂದ್ರದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸೇತುಬಂಧ ಕಾರ್ಯಕ್ರಮವನ್ನು ನಡೆಸದೇ ನೇರವಾಗಿ ಶಾಲೆಗೆ ದಾಖಲು ಮಾಡಿಕೊಂಡಿರುವುದನ್ನು ಗಮನಿಸಿದ್ದು, ನಿಯಮಾನುಸಾರ ಕ್ರಮ ವಹಿಸಲು ಪ್ರಾಂಶುಪಾಲರಿಗೆ ತಿಳಿಸಲಾಯಿತು. ಬಿಇಒ/ಬಿಆರ್‌ಸಿಯವರು ಸಹ ಈ ಕುರಿತು ಜವಾಬ್ದಾರಿ ತೆಗೆದುಕೊಳ್ಳಲು ನಿರ್ದೇಶನ ನೀಡಲಾಯಿತು. ಮುಂದುವರಿದಂತೆ ವಸತಿ ನಿಲಯಕ್ಕೆ ಭೇಟಿ ನೀಡಲಾಗಿ, ಹಾಸಿಗೆ, ಹೊದಿಕೆಯ ಶುಚಿತ್ವದ ಕಡೆ ಗಮನಹರಿಸಿಲ್ಲದಿರುವುದು ಕಂಡು ಬಂದಿದ್ದು, ವಾರ್ಡ್‌ನ್‌ರವರು ಈ ಬಗ್ಗೆ ತುರ್ತು ಕ್ರಮ ವಹಿಸಲು, ಪ್ರಾಂಶುಪಾಲರು ಮೇಲ್ವಿಚಾರಣೆ ನಡೆಸಲು ತಿಳುವಳಿಕೆ ನೀಡಲಾಯಿತು.

ಮುಂದುವರಿದಂತೆ ಮಕ್ಕಳಿಗೆ ಆಹಾರ ಸರಬರಾಜು ಮಾಡಲು ಟೆಂಡರ್ ಕರೆದು, ಒಪ್ಪಂದ ಮಾಡಿಕೊಂಡಿದ್ದು, ನಿಯಮಾನುಸಾರ ವಿತರಣೆ ಮಾಡುತ್ತಿಲ್ಲದಿರುವುದು ಭೇಟಿ ವೇಳೆ ಕಂಡು ಬಂತು. ಒಪ್ಪಂದದ ಪ್ರಕಾರ ಸರಬರಾಜು ಮಾಡಲು ಪ್ರಾಂಶುಪಾಲರಿಗೆ ನಿರ್ದೇಶನ ನೀಡಲಾಯಿತು.

**ಕ್ರಮ : ಪ್ರಾಂಶುಪಾಲರು/ವಾರ್ಡ್‌ನ್ ಮತ್ತು ಬಿಇಒ/ಬಿಆರ್‌ಸಿ, ಬಂಗಾರಪೇಟೆ ತಾ**

ರಾಮಸಾಗರ, ಬಂಗಾರಪೇಟೆ ತಾಲ್ಲೂಕು ಇಲ್ಲಿ ಶಾಲೆಗೆ ದಾಖಲಾಗಿರುವ ಮಕ್ಕಳನ್ನು ಒಒಎಸ್‌ಸಿ ಮಕ್ಕಳೆಂದು ತೋರಿಸಿ 12 ಆರ್‌ಎಸ್‌ಟಿಯನ್ನು ನಡೆಸುತ್ತಿದ್ದಾರೆಂಬ ಲಿಖಿತ ದೂರನ್ನು ನೀಡಿದ್ದು, ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಲಾಗಿ, ಮೇಲ್ನೋಟಕ್ಕೆ ನಿರಂತರವಾಗಿ ಶಾಲೆಗೆ ಹೋಗುತ್ತಿದ್ದು, 2 ರಿಂದ 15 ದಿನದ ಅವಧಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ 12 ತಿಂಗಳ ಆರ್‌ಬಿಸಿ ಕೇಂದ್ರ ನಡೆಸುತ್ತಿರುವುದಾಗಿ ತಿಳಿದು ಬಂತು. ಈ ಕಛೇರಿ

ಸುತ್ತೋಲೆ ಸಂಖ್ಯೆ ಸಶಿಅ/ಒಒಎಸ್‌ಸಿ/ಸುತ್ತೋಲೆ/2012–13, ದಿನಾಂಕ: 30.05.2012 ರಲ್ಲಿ ಸ್ಪಷ್ಟವಾಗಿ ಶಾಲೆಯಿಂದ ಹೊರಗುಳಿದ ಹಿರಿಯ ವಯಸ್ಸಿನ ಮತ್ತು ಮುಖ್ಯ ವಾಹಿನಿಗೆ ಸೇರಲು ಹೆಚ್ಚು ಸಮಯವನ್ನು ಬೇಡುವ ಮಕ್ಕಳನ್ನು ಮಾತ್ರ 12 ತಿಂಗಳ ಆರ್‌ಎಸ್‌ಟಿ ಅಡಿಯಲ್ಲಿ ತರಬೇತಿ ನೀಡಿ ಅವರ ಕಲಿಕಾ ಗುಣಮಟ್ಟಕ್ಕನುಗುಣವಾಗಿ ತರಗತಿಗೆ ದಾಖಲು ಮಾಡುವಂತೆ ತಿಳಿಸಲಾಗಿದ್ದರೂ ಸಹ, ಈ ಅಂಶವನ್ನು ಡಿಡಿಪಿಐ/ಡಿವೈಪಿಸಿ/ಬಿಇಒ/ಬಿಆರ್‌ಸಿ ಅವರು ಪರಿಗಣಿಸದೇ, ಕೇಂದ್ರವನ್ನು ತೆರೆದು, ಸರ್ಕಾರದ ಅನುದಾನವನ್ನು ವ್ಯರ್ಥ/ದುರ್ಬಳಕೆ ಮಾಡುತ್ತಿರುವ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಸಂಬಂಧಿಸಿದವರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ ಕ್ರಮ ಕೈಗೊಂಡು ವರದಿ ಮಾಡಲು ತಿಳಿಸಲಾಯಿತು.

**ಕ್ರಮ : ಬಿಇಒ/ಬಿಆರ್‌ಸಿ, ಬಂಗಾರಪೇಟೆ ತಾ. ಕೋಲಾರ ಜಿಲ್ಲೆ**

ಮೇಲ್ಕಂಡ ಎಲ್ಲಾ ಅಂಶಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸಿ ರಾಜ್ಯ ಕಛೇರಿಗೆ ವರದಿ ಮಾಡಲು ತಿಳಿಸಿದೆ.

7.3.13

**(ಸುಬೋಧ್ ಯಾದವ್, ಭಾ.ಆ.ಸೇ)**
ರಾಜ್ಯ ಯೋಜನಾ ನಿರ್ದೇಶಕರು
ಎಸ್‌ಎಸ್‌ಎ/ಆರ್‌ಎಂಎಸ್‌ಎ

ಗೆ

- ✓ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ
- ✓ ಡಿವೈಪಿಸಿ, ಕೋಲಾರ
- ✓ ಬಿಇಒ/ಬಿಆರ್‌ಸಿ, ಬಂಗಾರಪೇಟೆ,
- ✓ ಮುಖ್ಯ ಶಿಕ್ಷಕರು, ಹಿರಿಯ ಪ್ರಾಥಮಿಕ ಶಾಲೆ, ಕ್ಷೇತ್ರ ಶಿಕ್ಷಣಾಧಿಕಾರಿಗಳವರ ಕಛೇರಿ ಆವರಣ, ಬಂಗಾರಪೇಟೆ
- ✓ ಪ್ರಾಂಶುಪಾಲರು, ಕೆ.ಜಿ.ಬಿ.ವಿ, ರಾಮಸಾಗರ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ
- ✓ ರಾಜ್ಯ ಕಛೇರಿಯಿಂದ ನೇಮಕಗೊಂಡಿರುವ ಕೋಲಾರ ಜಿಲ್ಲೆಯ ನೋಡಲ್ ಅಧಿಕಾರಿಯವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
- ✓ ಸಹ ನಿರ್ದೇಶಕರು (ಆಡಳಿತ), ಎಸ್‌ಎಸ್‌ಎ, ಬೆಂಗಳೂರು
- ✓ ಕಛೇರಿ ಪ್ರತಿ